**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯಃ ಕೊಪ್ಪ</u>**

<u>ಸಿ.ಸಿ. ನಂ.***169/2024***</u>

| | |
|---|---|
| ***ಫಿರ್ಯಾದುದಾರರುಃ*** | ಸರ್ಕಾರದ ಪರವಾಗಿ ಹರಿಹರಪುರ ಪೊಲೀಸರು |

**ವಿರುದ್ಧ**

| | | |
|---|---|---|
| ಆರೋಪಿತರು | 1 | ಸರೋಜ ಕೋಂ ಲೇಟ್ ಅನಂತ ನಾಯ್ಕ, 60 ವರ್ಷ, ಕೂಲಿ ಕೆಲಸ, ವಾಸ ಶೇಡ್ಗಾರು, ಶೆಡ್ಗಾರು ಗ್ರಾಮ, ತೀರ್ಥಹಳ್ಳಿ ತಾಲ್ಲೂಕು. |
| | 2 | ಗುರುಮೂರ್ತಿ ಎಸ್.ಎ. ಬಿನ್ ಲೇಟ್ ಅನಂತ ನಾಯ್ಕ, 38 ವರ್ಷ, ಕೂಲಿ ಮತ್ತು ವ್ಯವಸಾಯ ಕೆಲಸ, ವಾಸ ಶೇಡ್ಗಾರು, ಶೆಡ್ಗಾರು ಗ್ರಾಮ, ತೀರ್ಥಹಳ್ಳಿ ತಾಲ್ಲೂಕು. |
| | 3 | ಸುರೇಶ ಎಂ. ಬಿನ್ ಲೇಟ್ ಮುಕುಂದ ನಾಯ್ಕ, 47 ವರ್ಷ, ವ್ಯವಸಾಯ ಕೆಲಸ, ವಾಸ ನೀರುಬಾವಿಜಡ್ಡು, ಅದ್ದಡ ಗ್ರಾಮ, ಕೊಪ್ಪ ತಾಲ್ಲೂಕು. |
| | 4 | ಮಂಜುನಾಥ್ ನಾಯ್ಕ ಬಿನ್ ಲೇಟ್ ಕುಂಬಾ ನಾಯ್ಕ, 55 ವರ್ಷ, ವ್ಯವಸಾಯ ಕೆಲಸ, ವಾಸ ನೀರುಬಾವಿಜಡ್ಡು, ಅದ್ದಡ ಗ್ರಾಮ, ಕೊಪ್ಪ ತಾಲ್ಲೂಕು. |
| | 5 | ಕೃಷ್ಣಪ್ಪ ನಾಯ್ಕ ಬಿನ್ ಅಪ್ಪು ನಾಯ್ಕ, 65 ವರ್ಷ, ವ್ಯವಸಾಯ, ವಾಸ ಬೆಟವಾನಿ, ದೇವಂಗಿ ಗ್ರಾಮ, ತೀರ್ಥಹಳ್ಳಿ ತಾಲ್ಲೂಕು. ( **ಮೃತಪಟ್ಟಿರುತ್ತಾರೆ**) |

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ ಆದ ನಾನು ಮೇಲ್ಕಂಡ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಹರಿಹರಪುರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅದ್ದಡ ಗ್ರಾಮ, ನೀರುಬಾವಿಜಡ್ಡುವಿನಲ್ಲಿ 1 ನೇ ಆರೋಪಿ ಹಾಗೂ ಚಾಸಾ.4 ಕೃಷ್ಣನಾಯ್ಕ ರವರಿಗೆ ಸರ್ವೆ ನಂಬರ್ 316 ಮತ್ತು 317 ರಲ್ಲಿನ ಜಮೀನಿನ ವಿವಾದವಿದುದ, ದಿನಾಂಕ *11.01.2024* ರಂದು ಮಧ್ಯಾಹ್ನ *2.45* ಗಂಟೆ ಸಮಯದಲ್ಲಿ ಚಾಸಾ.1 ರಮೇಶ್ ರವರು ಚಾಸಾ.4 ರವರ ಮನೆಗೆ ಹೋಗಿ ವಾಪಸ್ಸು ಹೊರಟು ಮನೆ ಅಂಗಳಕ್ಕೆ ಬಂದಾಗ 1 ಮತ್ತು 2 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ನಿಮ್ಮ ಕೈಯಲ್ಲಿ ಕತ್ತಿಯನ್ನು ಹಿಡಿದುಕೊಂಡು ಸದರಿ ಕತ್ತಿಯಿಂದ ಚಾಸಾ.1 ರವರ ತಲೆಗೆ, ಬಲಕೆನ್ನೆಗೆ, ಎಡಗೈ ತೋಳಿಗೆ, ಬಲಕೈ ಭುಜಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದೀರಿ. ಆ ಮೂಲಕ **ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ ಕಲಂ 149 ರ** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದೂ,

ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಮುಂದುವರೆದು ನಿಮ್ಮ ಪೈಕಿ 3 ರಿಂದ 5ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ-1 ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದೀರಿ. ಆ ಮೂಲಕ **ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 149ರ** ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ ಎಂದೂ,

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ಆ-1 ತಿಳಿಯಿತು ಆ-4 ತಿಳಿಯಿತು

ಆ-2 ತಿಳಿಯಿತು ಆ-5 ಮೃತಪಟ್ಟಿರುತ್ತಾರೆ.

ಆ-3 ತಿಳಿಯಿತು

ಪ್ರಃ2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ಆ-1 ವಿಚಾರಣೆಯಾಗಬೇಕು ಆ-4 ವಿಚಾರಣೆಯಾಗಬೇಕು

ಆ-2 ವಿಚಾರಣೆಯಾಗಬೇಕು ಆ-5 ಮೃತಪಟ್ಟಿರುತ್ತಾರೆ.

ಆ-3 ವಿಚಾರಣೆಯಾಗಬೇಕು

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ 03.07.2025.

ಸಹಿ/- 03.07.2025.

(ನಂದಿನಿ ಎಂ.ಎನ್. )
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.